# ಶ್ರೀ ವಿಜಯದಾಸರ ಹಿತೋಪದೇಶ ಸುಳಾದಿ

- ವಿಜಯದಾಸ

**ಧ್ರುವತಾಳ -**

ಹರಿದಾಸರೊಡನಾಡು ಹರಿಯಂಘ್ರಿಯುಗ್ಮ ನೋಡು
ಹರಿಯೆಂದು ಕೊಂಡಾಡು ಹರಿನಾಮ ಹಾಡಿ ಪಾಡು
ಹರಿಪ್ರಸಾದವ ಬೇಡು ಹರಿಸೇವೆಯನೆ ಮಾಡು
ಹರಿಗೆ ಕರವ ನೀಡು ಹರಿಯ ಬಿಡದೆ ಕಾಡು
ಹರಿಯ ಪೊಗಳಿ ಪಾಡು ಹರಿಗೆ ಮನಸು ಕೊಡು
ಹರಿಗೊಪ್ಪಿಸು ಈ ಬೀಡಿ ಹರಿದ್ವೇಷಿಗಳ ಬಿಡು
ಹರಿಧ್ಯಾನದಲಿ ಕೂಡು ಹರಿಕರುಣವೇ ಜೋಡು
ಹರಿಯದಂತೆ ತೊಡು ಹರಿನಗರಿಗೆ ಓಡು
ಹರಿಯಲ್ಲಿ ರತಿ ಇಡು ಹರಿ ವಿಜಯವಿಠಲನ್ನ
ಹರಿ ಎಂದರೆ ಈ ನಾಡು ಹರುಷ ಪಡುವರು ನೋಡು
ಹರಿದು ಪೋಗದೇ? ಕೇಡು ॥ ॥ 1 ॥

ಸಾಧಕನಾದ ಜೀವಿ ಉದ್ಧಾರವಾಗಲು ಏನನ್ನು ಅವಲಂಬಿಸಬೇಕು, ಏನನ್ನು ಬಿಡಬೇಕು ಎಂಬುದರ ಪಟ್ಟಿಯನ್ನು ಈ ಸುಳಾದಿಯಲ್ಲಿ ಶ್ರೀ ವಿಜಯದಾಸರು ನೀಡಿ ಮಹದುಪಕಾರವನ್ನು ಮಾಡಿರುವರು. ಇಲ್ಲಿ ಶ್ರೀ ಹರಿಯಲ್ಲಿ ರತಿ ಹುಟ್ಟಲು ಬೇಕಾದ ಎಲ್ಲ ಸಾಧನಗಳ ಬಗ್ಗೆ ವಿವರವನ್ನು ನೀಡಿರುವರು. ಗುರಿಸಾಧಿಸಲು ಯಾವದು ಸರಿ ಯಾವದು ತಪ್ಪು ಎಂದು ವಿವೇಚಿಸಿರುವರು.

ಶ್ರೀಹರಿಯನ್ನೆ ಸರ್ವಾತ್ಮನಾ ನಂಬಿ ನಡೆಯುವ ಸಾಧು ಸಜ್ಜನರು ಹರಿದಾಸರು. ಭಗವಂತನ ದಾಸನೆಂದು, ಅವನೇ ಗತಿ ಎಂದು ವಿಶ್ವಾಸ ಹೊಂದಿ ಅವರ ಆಜ್ಞಾಧಾರಕರಾಗಿ ವರ್ತಿಸುವವರು. ಹೀಗಾಗಲು ಜೀವನದಲ್ಲಿ ಶಾಸ್ತ್ರೋಕ್ತವಾದ ವಿಧಿನಿಷೇಧಗಳನ್ನು ಪಾಲಿಸಬೇಕು. ಇವೇ ಸಾಧನಗಳೆನಿಸಿವೆ. ಇದರ ವಿವರವೇ ಈ ಸುಳಾದಿಯ ವಿಷಯವಾಗಿದೆ. ಶ್ರೀಹರಿಯ ಅನುಗ್ರಹ ಬಯಸುವವನು ಹರಿದಾಸರ ಸಂಗದಲ್ಲಿರಬೇಕು. 'ಸಂಗವಾಗಲಿ ಸಾಧು ಸಂಗವಾಗಲಿ' ಎಂದದ್ದರ ಕಾರಣ ಇದರಿಂದ ಭಗವಂತನ ಜ್ಞಾನವಾಗಿ, ಸದಾಚಾರ - ಸದ್ವಿಚಾರಗಳಲ್ಲಿ ಮುಳುಗುವ. ಆಗ ಮಾತ್ರ ಶ್ರೀಹರಿಯ ಪಾದದ್ವಂದ್ವವನ್ನು ಕಾಣಲು ಸಾಧ್ಯ. ಶ್ರೀಹರಿಯ ಪಾದದ್ವಂದ್ವಗಳು ಜ್ಞಾನ ಹಾಗೂ ಆನಂದದ ಸಂಕೇತ, ಪಾದಗಳು (ಸುವಃ ಎಂದೆನಿಸಿವೆ.) ಶ್ರೀ ವಾದಿರಾಜರು 'ಮಾತುಮಾತಿಗೆ ಕೇಶವ ನಾರಾಯಣ ಮಾಧವ

ಎನಬಾರದೆ ಹೇ ಜಿಹ್ವೆ ಎಂದಂತೆ ಶ್ರೀಹರಿಯನ್ನು ಸ್ಮರಿಸುತ್ತ ಕೊಂಡಾಡಬೇಕು. ಇದು ತಲೆಗೆ ಆಹಾರವಾದರೆ ಉದರಕ್ಕೆ ಹರಿಪ್ರಸಾದವನ್ನು ಸ್ವೀಕರಿಸಬೇಕು. ಸದಾ ಹರಿಸೇವೆಯಲ್ಲಿ ಅಂದರೆ ಭಗವಂತನ ಅರ್ಚನಾದಿಗಳಲ್ಲಿ, ಭಗವದ್ಭಕ್ತರ ಸೇವೆಯಲ್ಲಿ ನಿರತರ್ರಾಗಿರುವುದು. ಹರಿಯಾಜ್ಞೆ ಎಂದು ಎಲ್ಲ ಸತ್ಕಾರ್ಯಗಳನ್ನಾಚರಿಸುವುದು. ಪರಗತಿಗೆ ಇವನೆ ಕಾರಣನೆಂದು ಕಾಡಿ ಬೇಡಿಯಾದರೂ ಇವನನ್ನು ಒಲಿಸಿಕೊಳ್ಳಬೇಕು ಎಂದರು. 'ಮನವನಿತ್ತರೆ ತನ್ನನೀವನು' ಎಂದದ್ದರಿಂದ ನಮ್ಮ ತನುಮನಾದಿಗಳನ್ನು ಅವನಿಗೆ ಒಪ್ಪಿಸಿ ಅವನ ಗುಣಗಾನ ಮಾಡುತ್ತಲಿರುವುದೆ ಮಾಡುವ ಮುಖ್ಯ ಕಾರ್ಯವೆಂದರು. ಎಂದಿಗೂ ಹರಿದ್ವೇಷಿಗಳ ಸಹವಾಸ ಮಾಡದೆ ಸಮಚಿತ್ತನಾಗಿ ಶ್ರೀಹರಿಯ ಮಾಹಾತ್ಮ್ಯಗಳ ಚಿಂತನೆಯಲ್ಲಿ ನಿರತರಾಗಿರೆಂದರು. ಇದರಿಂದ ಮಾತ್ರ ಭಗವಂತನ ಕರುಣೆ ಸಿಗಲು ಸಾಧ್ಯ. ಇಂತಹ ಸಾಧನಗಳಿಂದ ಲಬ್ಧವಾದ ಹರಿಯ ಕರುಣೆ ನಿರಂತರವಾಗಿ ಇರಲು ಸಾಧ್ಯ. ಆಗಮಾತ್ರ ನಿತ್ಯ ಸುಖಕ್ಕೆ ನೆಲೆಯಾದ ಮುಕ್ತಿ ಸ್ಥಾನ ದೊರೆಯುವುದು. ಶ್ರೀಹರಿಯಿಂದ ಲಭ್ಯವಾಗುವ ಅವನ ಪ್ರಸಾದದಿಂದ ಹರಿನಗರಿಗೆ ಅಂದರೆ ವೈಕುಂಠಕ್ಕೆ ಓಡಲು ಸುಲಭ ಸಾಧ್ಯವಾಗುವುದು. ಇದು ಸುಲಭದ ದಾರಿಯಾಗುವುದು. ಶ್ರೀಹರಿಯನ್ನು ನೆನೆದಾಗ, ನೆನೆಯುವಾಗಿ ಪಾಪಗಳೆಂಬ ತೂಲರಾಶಿಯು ಭಸ್ಮವಾಗುವುದು. ಎಲ್ಲ ಕಷ್ಟ ಕಾರ್ಪಣ್ಯಗಳು ನಾಶ ಹೊಂದುವುದು. ಶ್ರೀಹರಿಯ ಸ್ಮರಣೆ ಮಾತ್ರದಿ ಹರುಷ ಜೊತೆಗೆ ಅನಿಷ್ಟಗಳ ನಾಶ.

**ಮಟ್ಟತಾಳ**

ಹರಿಭಕುತಿ ಹರಿಯ ಬಲ್ಲವನಲ್ಲಿ
ಹರಿ ತಾ ಹತ್ತರೊಳಗೆ ಹರಿ ಹರಿದಾಡುವ
ಹರಿವಂತನು ಕಾಣೋ ಹರಿದಿಕ್ಕುವ ಭವದ
ಹರಿಯೊಳಗಿಂದಲಿ ಹರಿದೆದ್ದು ಒಪ್ಪ
ಹರಿಗಂಡವನೆನ್ನು ಹರಿವದನ ನಮ್ಮ ವಿಜಯವಿಠಲ
ನರಹರಿ ನಾಮವೆ ಪರಿಹರಿಸುವುದು ನರಕಾ ॥

ಮಾಹಾತ್ಮ್ಯಜ್ಞಾನ ಪೂರ್ವಕವಾಗಿ ಶ್ರೀಹರಿಯನ್ನು ತಿಳಿದಾಗ ಸರ್ವಾಧಿಕ ನಿರವಧಿಕ ಭಕ್ತಿಯು ಮಾತ್ರ ಅವನಲ್ಲಿ ಅತಿಶಯವಾದ ಭಕ್ತಿಯನ್ನುಂಟುಮಾಡುವುದು. ನವವಿಧ ಭಕ್ತಿಗಳ ಮೂಲಕ ಅವನನ್ನು ಸ್ತುತಿಸಲು, ಕಾಣಲು ಸಾಧ್ಯ ಅವನೇ ಜೀವನಲ್ಲಿಯ ಹತ್ತಾದ ಪಂಚಜ್ಞಾನೇಂದ್ರಿಯ ಪಂಚಕರ್ಮೇಂದ್ರಿಯಗಳಲ್ಲಿ ಇದ್ದು ಪ್ರೇರೇಪಿಸಿ ನಮ್ಮಿಂದ ಸಕಲ ವ್ಯಾಪಾರವನ್ನು ಮಾಡಿಸುವ. ಇದನ್ನು ತಿಳಿದವನು ಮಾತ್ರ ಶ್ರೀ ಈಹರಿಯನ್ನು ಬಲ್ಲವನಾಗುವ. ಹರಿದಿಕ್ಕುವ ಅಂದರೆ ನಮ್ಮನ್ನು ಹರಿದು ಹಣ್ಣಾಗಿಸಿ ತಿನ್ನುವ ಈ ಬವಣೆಯ ಈ ಸಂಸಾರದಿಂದ ನಮ್ಮನ್ನು ದಾಟಿಸುವವನು ಅವನೆ ಎಂದು ತಿಳಿದ ಜ್ಞಾನಿಯು, ಸ್ವತಂತ್ರನಾದ ಭಗವಂತನನ್ನು ಸಾಕ್ಷಾತ್ಕರಿಸಿಕೊಂಡವನಾಗುವ. ಹರಿವದನನಾದ ನಾರಸಿಂಹನೆ ನಮ್ಮ ವಿಜಯವಿಠಲ. ಇವನ ನಾಮವು ಎಂದರೆ ಅನುಸಂಧಾನಪೂರ್ವಕ ನಾಮೋಚ್ಚಾರಣೆಯು ನಮ್ಮನ್ನು ನರಕಾದಿಗಳಿಂದ ರಕ್ಷಿಸಿ ಈ ಸಂಸಾರವೆಂಬ ಸಾಗರವನ್ನು ದಾಟಿಸಬಲ್ಲುದು. (ಸಶೇಷ)

ವಿಜಯದಾಸಾರ್ಯರ ಸುಳಾದಿ : 3

## ಶ್ರೀ ವಿಜಯದಾಸರ ಹಿತೋಪದೇಶ ಸುಳಾದಿ – 2

– ವಿಜಯದಾಸ

**ತ್ರಿವಿಡ ತಾಳ:**

ಹರಿಯ ನಂಬಿರೋ ಜನರು ವೈರಾಗ್ಯಪರರಾಗಿ
ಹರಿದು ಪೊಗದೆ ನಿತ್ಯ ಪರರ ವಡವಿಗೆ
ಹರಿ ಹನುಮಂತ ಒಂದೆ ಎಂದು ತಿಳಿದು
ಹರಿ ಇದ್ದಲ್ಲಿ ಪವಮಾನ ಇಪ್ಪನೆಂದು
ಹರಿಯ ಭಜಿಸಿ ಪವಮಾನನ್ನ ತೊರೆದರೆ
ಹರಿಪುರವಾಗದು ಶತಕಲ್ಪಕ್ಕೂ
ಹರಿಶರಣರ ಬಳಿವಿಡಿದು ಭಕುತಿಯಲ್ಲಿ
ಹರಿಶ್ರವಣದ ಕೇಳು ಶ್ರವಣದಲ್ಲಿ
ಹರಿತವಂದಿತ ನಮ್ಮ ವಿಜಯವಿಠಲರೇಯ
ಹರಿ ಎಂದು ನುಡಿದರೆ ಹರಿದು ಬ್ರಹ್ಮನು ಕಾಣೋ ॥ 3 ॥

ಶ್ರೀಕೃಷ್ಣ 'ಯೋಗಕ್ಷೇಮಂ ವಹಾಮ್ಯಹಂ' ಎಂದು ಹೇಳಿರುವ. ಆದರೆ ಶ್ರೀಹರಿಯನ್ನು ಸರ್ವಾತ್ಮನಾ ನಂಬಬೇಕು. ನಂಬಿದವರನ್ನು ಕೈಬಿಡದವನು ಅವನೊಬ್ಬನೆ. ಅವನ ಬಗ್ಗೆ ತಿಳಿಯಬೇಕಾದರೆ ಜ್ಞಾನಭಕ್ತಿವೈರಾಗ್ಯಾದಿ ಗುಣಗಳಿಂದ ಸಂಪನ್ನರಾಗಬೇಕು. ವೇದಪುರಾಣ ಇತಿಹಾಸ ಹರಿದಾಸರ ಸಾಹಿತ್ಯಗಳ ಅಧ್ಯಯನದಿಂದ ಲಭ್ಯವಾಗುವ ಜ್ಞಾನ ಶ್ರೀಹರಿಯ ಮಾಹಾತ್ಮ್ಯೆಯನ್ನು ತಿಳಿಸುತ್ತದೆ. ಅವನ ಮಾಹಾತ್ಮ್ಯಜ್ಞಾನ ಪಡೆದಂತೆ ಅವನ ಮೇಲಿನ ನಿರ್ವ್ಯಾಜ ನಿರವಧಿಕವಾದ, ಅಮಲವಾದ ಭಕ್ತಿಯು ಉಂಟಾಗುತ್ತದೆ. ಇವುಗಳಿಂದಾಗಿ ಅವನನ್ನು ಬಿಟ್ಟು ಇತರ ವಸ್ತುಗಳ ವ್ಯಾಮೋಹ, ಅಭಿಮಾನ ಕಡಿಮೆಯಾಗಿ ವೈರಾಗ್ಯವಂತನಾಗುವ. ಪರರ ವಸ್ತುಗಳ ಬಯಕೆ ಇಲ್ಲವಾಗುವುದು. ಹರಿಯ ಮತವೇ ಹನುಮನ ಮತವು. ಆದ್ದರಿಂದ ಹನುಮನ ಸಿದ್ಧಾಂತ ಬಿಟ್ಟು ಹರಿಯ ಮತವೆಂಬುದಿಲ್ಲ. ಅದಕ್ಕೆ ಶ್ರೀ ವಿಜಯದಾಸರು ಒಂದೆ ಎಂದು ಹೇಳಿ ಪವಮಾನನನ್ನು ಬಿಟ್ಟು ಶ್ರೀಹರಿ ಒಬ್ಬನೆ ಸಾಕೆಂದರೆ ಎಂದಿಗೂ ಹೊಂದದ ಮಾತೆಂದು ಹೇಳುವರು. ಅಲ್ಲದೆ ಹೀಗೆ ಶ್ರೀಮನ್ನಾರಾಯಣನನ್ನು ಮಾತ್ರ ಶತಕಲ್ಪದ ಕಾಲ ಭಜಿಸಿದರೂ ಶ್ರೀಹರಿಯ ಒಲುಮೆ ಸಿಗದು. ಇನ್ನು ವೈಕುಂಠಪ್ರಾಪ್ತಿ ಎಂಬುದೆಲ್ಲಿ. ಶ್ರೀಹರಿಯ ಕಥಾಶ್ರವಣ ಹಾಗೂ ಹರಿಯ ಏಕಾಂತ ಭಕ್ತರಾದ ವಾಯುದೇವರ ಅವತಾರಗಳ ಮಹಿಮೆ ಜೊತೆಗೆ ಹರಿಭಕ್ತರಲ್ಲಿ ತೋರುವ ಭಕ್ತಿಯೂ ಮುಕ್ತಿಗೆ ಸಾಧನವಾಗಿದೆ. ಶ್ರೀಹರಿಯ ಕಥಾಶ್ರವಣ ಸದಾ ಶ್ರದ್ಧಾಭಕ್ತಿಗಳಿಂದ ಮಾಡುತ್ತ ಹರಿಗುರುಗಳನ್ನು ಭಜಿಸುತ್ತ, ವಿಜಯವಿಠಲನಾದ ಶ್ರೀಹರಿಯ ನಾಮಸ್ಮರಣೆ ಮಾಡುತ ಇದ್ದಲ್ಲಿ ಅವಸರಕೆ ಅಮರಗಣಸಹಿತ ಭಗವಂತ ಧಾವಿಸಿ ಬಂದು ಸಲಹುವನು.

**ಅಟ್ಟತಾಳ :** ಹರಿಯ ಭಕುತಿ ಕಂಡವರಿಗೆ ದೊರಕುವದೆ
ಹರಿದೇರಿ ಪರ್ವತಾಗ್ರದಿಂದ ಭೂಮಿಗೆ
ಹರಿದು ಬಿದ್ದರೆ ಇಲ್ಲ, ಸುತ್ತುವ ಸುಳಿಯೊಳು
ಹರಿದು ಮುಣುಗಿ ಹೋಗಿ ಎದ್ದು ಬಂದರೆ ಇಲ್ಲ
ಹರಿಯೊಳಗೆ ನಿತ್ಯ ಹಗಲಿರುಳು ತಲೆ-
ಹರಿಮಾಡಿಕೊಂಡು ನಭಕೆ ಹಾರಿದರಿಲ್ಲ
ಹರಿಭಕುತಿ ಕಂಡವರಿಗೆ ಸೂರೆ
ಹರಿಭಕುತಿ ಸಂಪಾದನೆ ಗಂಟೆ
ಹರಿಣಾಂಕ ಕುಲಪಾಲ ವಿಜಯವಿಠಲನಂಘ್ರಿ
ಹರಿಯ ಬಲ್ಲವನಿಗೆ ಸುಲಭ ಸಾಧ್ಯವೆನ್ನಿ ॥ 4 ॥

ಭಕ್ತಿ ಎಂಬುದು ಎಲ್ಲರಿಗೂ ಎಲ್ಲಾದರೂ ಸಿಗುವ ವಸ್ತುವಲ್ಲ. ಬಹು ಜನ್ಮಗಳ ಸಾಧನ ಫಲವಾಗಿ ದೊರಕುವ ಸಿದ್ಧಿ ಇದಾಗಿದೆ. 'ಹರಿರೇವ ಜಗತ್ಪಿತೃಮಾತೃಗತಿಃ' ಎಂದು ತಿಳಿದು ಸರ್ವಾತ್ಮನಾ ಅವನನ್ನೇ ನಂಬಿ, ಅವನ ಮಾಹಾತ್ಮ್ಯಜ್ಞಾನ ಪಡೆದವಗೆ ಶ್ರೀಹರಿಯೆ ಕರುಣೆ ತೋರಿ ಅವನ ಇರುವಿಕೆಯ ಜೊತೆಗೆ ಅವನ ಮಹಿಮೆಯನ್ನು ತೋರಿಸುವ. ಆಗಮಾತ್ರ ಅವನಲ್ಲಿ ಭಕ್ತಿ ಮಾಡಲು ಸಾಧ್ಯ. ಅದಕ್ಕೆಂದೇ ನವವಿಧ ಭಕ್ತಿಯನ್ನು ಮಾಡಬೇಕು. ಅದರಲ್ಲಿ ಮೊದಲನೆಯ ಸೋಪಾನವೇ ಶ್ರವಣ. ಇದಕ್ಕೆ ಗುರುಹಿರಿಯರಲ್ಲಿ ಮೊರೆಹೋಗಬೇಕು. ಇವುಗಳನ್ನು ಬಿಟ್ಟು ಬೇರಾವ ವಿಧಾನಗಳಿಂದಲೂ ಭಕ್ತಿಯ ಸಂಪಾದನೆ ಆಗದೆಂದು ದಾಸರು ಉದಾಹರಣೆಗಳ ಮೂಲಕ ಸ್ಥಿರಪಡಿಸುವರು. ಸಾಹಸಮಯವಾದ ಕಾರ್ಯಗಳಿಂದ ಅಂದರೆ ರಭಸದಿಂದ ದೊಡ್ಡ ಪರ್ವತವನ್ನು ಹತ್ತಿ ಅಲ್ಲಿಂದ ಧುಮುಕಿದರು ಭಕ್ತಿ ಲಭಿಸದು. ಸುಳಿಗಳಿಂದ ಯುಕ್ತವಾದ ಮಡುವಿನಲ್ಲಿ ಬಿದ್ದು ಸಾಹಸದಿಂದ ಎದ್ದುಬಂದರೂ ಭಕ್ತಿ ಸಿಗದು. ಸಕಲ ಪ್ರಯತ್ನಗಳಿಂದ ಆಕಾಶಕ್ಕೆ ಹಾರಿದರೂ ಆಗದು. ಹೀಗೆ ಬೇರೆ ಯಾವ ಪ್ರಯಾಸಗಳಿಂದಲೂ ಸಿಗದ ವಸ್ತು ಇದಾಗಿದೆ. ಪಾಂಡಿತ್ಯದಿಂದಾಗಲಿ ಸ್ವಾರ್ಥ ಪ್ರತಿಷ್ಠೆಗಳಿಂದ ಮೆರೆದರಾಗಲಿ ಭಗವಂತ ತನ್ನ ಪ್ರಭುತ್ವವನ್ನು ಬಿಟ್ಟುಕೊಡ. ತೋರಗೊಡನು. ಮೇಲೆ ತಿಳಿಸಿದಂತೆ ಭಗವದ್ಭಕ್ತನಾಗಲು ಅಧಿಕಾರವನ್ನು ಸಂಪಾದಿಸಿಕೊಳ್ಳಬೇಕು. ಈ ರಹಸ್ಯವನ್ನು ತಿಳಿದವ ಮಾತ್ರ ಹರಿಭಕ್ತನಾಗಬಲ್ಲ, ಅವನ ಒಲುಮೆಗೆ ಪಾತ್ರನಾಗಬಲ್ಲ. ಅದಕ್ಕೆ ದಾಸರೆಂದರು ಹರಿಯ ಹಾರ್ದ ಬಲ್ಲವನಿಗೆ ಮಾತ್ರ ಭಕ್ತಿ ಸಂಪಾದನೆ ಸುಲಭಸಾಧ್ಯವೆಂದು.

**ಆದಿತಾಳ :** ಹರಿ ಪರಮಪುರುಷ, ಹರಿಪರಾತ್ಪರ ದೇವ
ಹರಿ ಚತುರನಾಶರಹಿತ, ಹರಿ ಅಚಿಂತ್ಯಾದ್ಭುತ
ಹರಿ ಅಪ್ರಾಕೃತಕಾಯ, ಹರಿ ಪ್ರಳಯ ವಿರಹಿತ
ಹರಿ ಮುಕ್ತರಾಶ್ರಯ ಹರಿ ಸರ್ವಾಂತರ್ಯಾಮಿ
ಹರಿ ಜೀವಜಡಕೆ ಭಿನ್ನ, ಹರಿ ಅಣು ಮಹಾರೂಪ
ಹರಿಕರ್ತ ಜಗತ್ಕಾರಣ, ಹರಿ ರಮಾದಿಗಳ ಪ್ರಿಯ

ಹರಿ ವೈಕುಂಠ ರಮಣ, ವಿಜಯವಿಠಲರೇಯ
ಹರಿ ತೋರುವನು ಭಕುತಿ ಕೈಕೊಂಡ ಮನುಜರಿಗೆ ॥ 5॥

ಭಗವಂತನಲ್ಲಿ ಮಾಡಲೇಬೇಕಾದ ಭಕ್ತಿಯ ಸಂಪಾದನೆಯನ್ನು ತಿಳಿಸಿದ ದಾಸರು ಭಗವಂತನ ಅದ್ಭುತ ಮಹಿಮೆಯನ್ನು ಶಾಸ್ತ್ರೋಕ್ತವಾದ ಗುಣಗಳನ್ನು ಪಟ್ಟಿಮಾಡಿರುವರು. ಶ್ರೀಹರಿ ಸರ್ವೋತ್ತಮನಾಗಿರುವ ಅಂದರೆ ಕ್ಷರ ಅಕ್ಷರ ಪುರುಷರಿಗೂ ಉತ್ತಮನಾಗಿ ಪರಮ ಪುರುಷ ಎಂದೆನಿಸಿರುವ. ಎಲ್ಲವುಗಳಿಂದಲೂ ಭಿನ್ನನಾಗಿ ಪರಾತ್ಪರನಾಗಿ ಸೃಷ್ಟ್ಯಾದಿ ಅಷ್ಟಕರ್ತೃವು ಆಗಿರುವ. ಸಕಲ ಜೀವರಾಶಿಗೆ ಅಂಟಿಕೊಂಡಿರುವ ನಾಲ್ಕು ನಾಶಗಳಾದ ಅನಿತ್ಯತ್ವ, ದೇಹಹಾನಿ, ದುಃಖಪ್ರಾಪ್ತಿ ಹಾಗೂ ಅಪೂರ್ಣತೆ ಎಂಬುದರಿಂದ ರಹಿತನಾಗಿ ಇರುವ. ಅಪ್ರಮೇಯ ನೆಂದೆನಿಸಿ ಯಾವ ಪ್ರಮಾಣಗಳಿಂದಲೂ ತಿಳಿಯಲಸಕ್ಯನಾಗಿ ಚಿಂತನ-ಮಂಥನಗಳಿಗೆ ಸಿಲುಕದ ಅದ್ಭುತ ವ್ಯಕ್ತಿತ್ವದವನಾಗಿರುವ. ಪ್ರಾಕೃತವಾದ ಗುಣಗಳಿಂದ, ವಸ್ತುಗಳಿಂದ ದೂರನಾಗಿ ಅಪ್ರಾಕೃತವಾದ ಸತ್‌ಚಿತ್ ಆನಂದಾತ್ಮಕವಾದ ಶರೀರ ಉಳ್ಳವನಾಗಿರುವ. ಇವನು ಆದಿ ಅಂತ್ಯ ರಹಿತನಾದ್ದರಿಂದ ಪ್ರಳಯ (ನಾಶ)ರಹಿತನಾಗಿರುವ. ಅಣೋರಣೀಯ ಮಹತೋಮಹೀಯ ನಾದ್ದರಿಂದ ಸರ್ವಾಂತರ್ಯಾಮಿಯಾದ ಶ್ರೀಹರಿ ಮುಕ್ತರಿಗೂ ಆಶ್ರಯನಾಗಿ ಪ್ರಭುವಾಗಿ ರುವ. ಜೀವ ಜಡಗಳಿಂದ ಅತ್ಯಂತ ಭಿನ್ನನಾಗಿರುವ ಭಗವಂತ ಜೀವ ಜಡ ಜಗತ್ತಿಗೆ ನಿಯಾಮಕನಾಗಿರುವ. ಚೇತನಾಚೇತನ ಜಗತ್ತಿನಿಂದ ಭಿನ್ನನಾಗಿ ಸರ್ವವಸ್ತುಗಳ ಪ್ರೇರಕ ಹಾಗೂ ಸರ್ವಪ್ರವರ್ತಕನಾಗಿರುವ. ಹೀಗಿರುವುದರಿಂದಲೇ ಶ್ರೀಹರಿ ಸರ್ವಾಂತರ್ಯಾಮಿ ಯಾಗಿ ವ್ಯಾಪಿಸಿ ಸರ್ವಚೇಷ್ಟಾದಾಯಕನೂ ಆಗಿ ಸ್ವತಂತ್ರ ಕರ್ತನೆನಿ ಸಿರುವನು. ಜಗತ್ತಿನ ಜನ್ಮಾದಿಗಳಿಗೆ ಕಾರಣನಾಗಿ ಸಕಲ ಸಚ್ಚೇತನರಿಗೂ ಪ್ರಿಯನಾಗಿ ರಮಾವಲ್ಲಭನಾಗಿರುವ. ವೈಕುಂಠನೆಂದೆನಿಸಿ ಅಂತ್ಯಗತಿತಾನಾಗಿ ರಮಾಬ್ರಹ್ಮಾದಿಗಳಿಂದಲೂ ಸರ್ವದಾ ವಂದ್ಯನಾಗಿ ಮುಕ್ತ ಹಾಗೂ ಅಮುಕ್ತರಿಗೆ ನಿಯಾಮಕನಾಗಿರುವ. ಇಂತಹ ಸಾಕಲ್ಯೇನ ತಿಳಿಯಲು ಯಾರಿಂದಲೂ ಸಾಧ್ಯವಾಗದ ಅಪ್ರಮೇಯನಾದ ಭಗವಂತ ಶ್ರೀವಿಜಯವಿಠಲನು, ತನ್ನನ್ನು ತಿಳಿಯಲು, ಕಾಣಲು, ಅನುಗ್ರಹ ಪಡೆಯಲು ಹಂಬಲಿಸುವ ಅಧಿಕಾರಿಗಳಿಗೆ ಮಾತ್ರ ತನ್ನ ಮಹಿಮೆಗಳನ್ನು ತಿಳಿಸಿಕೊಟ್ಟು ಅನುಗ್ರಹಿಸುವ.

ಜತೆ: ಭಕುತಿಗೆ ಕೇಡಿಲ್ಲ ಅನಂತ ಕಲ್ಪಕೆ
ಭಕುತಿಯ ಪಡೆಯಿರೋ ವಿಜಯವಿಠಲನಲ್ಲಿ ॥ 6 ॥

ಶ್ರೀವಿಜಯದಾಸರು ಹರಿಭಕ್ತಿಯ ವೈಶಿಷ್ಟ್ಯವನ್ನು , ಅದರಿಂದ ದೊರಕುವ ಫಲವನ್ನು ಜೊತೆಗೆ ಹರಿಭಕ್ತಿ ಎಂಬುದು ಹೇಗೆ ಲಭಿಸುವುದೆಂದು ತಿಳಿಸಿದರು. ಹರಿಭಕ್ತನಾದವನು ಅವನ ಮಾಹಾತ್ಮ್ಯಜ್ಞಾನವನ್ನು ಪಡೆದು ಶಾಸ್ತ್ರೋಕ್ತ ರೀತಿಯಲ್ಲಿ ಚಿಂತಿಸಿ ಅವನ ಅನುಗ್ರಹಕ್ಕೆ ಪಾತ್ರ ನಾಗುವುದೊಂದೆ ಮಾರ್ಗವೆಂದು ಉಪದೇಶಿಸಿದರು. ಕಡೆಗೆ ಹೇಳುವಾಗ 'ನ ಹಿ ಕಲ್ಯಾಣಕೃತ್ ದುರ್ಗತಿಂ ತಾತಗಚ್ಛತಿ' ಎಂದಂತೆ ಭಗವಂತನಲ್ಲಿ ನಿರ್ವ್ಯಾಜವಾದ ಅಮಲಭಕ್ತಿಯನ್ನು ಮಾಡಿದವಗೆ ಎಂದಿಗೂ ಕೇಡಿಲ್ಲವೆಂದು, ಇಂತಹ ಭಕ್ತಿಯನ್ನು ಅವನಲ್ಲಿ ಮಾಡಿ ನಿಶ್ಚಿಂತರಾಗಿ ನಿರವಧಿಕ ಸುಖವನ್ನು ಪಡೆಯಿರೆಂದು ಕಿವಿಮಾತನ್ನು ಹೇಳಿರುವರು. *

**Courtesy:Haridasavahini**